ದಿನಾಂಕ 30-03-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ

1 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿ ಪರ ವಕೀಲರಿಂದಃ

ನನ್ನ ಹೆಸರು ಶೋಭಾ, ನನ್ನ ತಂದೆಯ ಹೆಸರು ಶಿವನಪ್ಪ ಚಲವಾದಿ, ನಾನು ಬೇಲೂರಿನ ವಾಸಿಯಾಗಿರುತ್ತೇನೆ. ನಾನು ಬೇಲೂರಿನಲ್ಲಿ ವಾಸವಾಗಿರುವುದರ ಬಗ್ಗೆ ಗುರುತಿನ ಚೀಟಿಗಳನ್ನು ಹಾಜರಪಡಿಸಿರುತ್ತೇನೆ. ನನ್ನ ಗಂಡನ ಆಸ್ತಿಯಲ್ಲಿ ಭಾಗ ಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ಗಂಡನ ಹೆಸರು ಹಾಲಪ್ಪ ಗುಡ್ಡಪ್ಪ ಕಾಳೇರ ಇರುತ್ತದೆ. ನನ್ನ ಗಂಡನ ಮನೆಯ ಹೊಲಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಮಾಡಿರುತ್ತೇನೆ. ಜಮೀನಿನ ಸರ್ವೆ ನಂ.152/2 ಕ್ಷೇತ್ರ 8 ಎಕರೆ 31 ಗುಂಟೆ ಇರುತ್ತದೆ. ಸದರಿ ಆಸ್ತಿಯು ಈಗ 2 ರಿಂದ 4 ನೇ ಪ್ರತಿವಾದಿಯರು ಮತ್ತು ಉಳಿದ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇರುತ್ತದೆ. ನನ್ನ ಮತ್ತು ಗುಡ್ಡಪ್ಪ ರವರ ಮದುವೆಯು ದಿನಾಂಕ 22-04-2000 ರಂದು ರಾಣೇಬೆನ್ನೂರಿನ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಾಯಿಸುವುದರ ಮೂಲಕ ಆಗಿರುತ್ತದೆ. ಈ ರೀತಿ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ನನ್ನ ತಂದೆ ತಾಯಿ, ಊರಿನ ಮುಖಂಡರು ಎಲ್ಲರೂ ಇದ್ದರು. ನನ್ನ ಗಂಡ ಮದುವೆಯನ್ನು ಸರಳವಾಗಿ ಆಗೋಣ ಎಂದು ಹೇಳಿರುತ್ತಾರೆ. ಆ ಕಾರಣ ಊರಿನಲ್ಲಿ ಆಗಿರುವುದಿಲ್ಲ. ಯಾವುದೇ ಅಡ್ಡಿ ಆತಂಕ ಬೇಡವೆಂದು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಮದುವೆಯಾಗಿರುತ್ತೇವೆ.

ಬೇಲೂರಿನಲ್ಲಿ ಮಂಜುಳಾ ಗುಡ್ಡಪ್ಪ ಕಾಳೇರ ಎಂಬುವವರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ನಮ್ಮ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ಅವರ ಪರಿಚಯ ಇದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 15-04-1991 ನೇ ಇಸವಿಯಲ್ಲಿ ಮಂಜುಳಾ ತಂದೆ ಫಕ್ಕೀರಪ್ಪ ಕಂಟಿ ಇವರು ಗುಡ್ಡಪ್ಪ ರವರನ್ನು ಮದುವೆಯಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ಸಚಿನ್ ಮತ್ತು ಪ್ರಿಯಾಂಕ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2000 ನೇ ಇಸವಿಗಿಂತ ಮುಂಚೆ ಗುಡ್ಡಪ್ಪ ಮತ್ತು ಮಂಜುಳಾ ಮತ್ತು ಅವರ ಇಬ್ಬರು ಮಕ್ಕಳು ಒಟ್ಟಾಗಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಗುಡ್ಡಪ್ಪ ಮತ್ತು ಮಂಜುಳಾ ಬೇಲೂರು ಗ್ರಾಮದಲ್ಲಿ ವಾಸವಾಗಿದ್ದು ಮಂಜುಳಾ ಇವರ ಜೊತೆ ಗುಡ್ಡಪ್ಪನಿಗೆ ಮೊದಲೇ ಮದುವೆಯಾಗಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಇಬ್ಬರು ಮಕ್ಕಳು ಇರುವುದು ಗೊತ್ತಿತ್ತು ಎಂದರೆ ಸರಿಯಲ್ಲ. ಗುಡ್ಡಪ್ಪ ಯಾರನ್ನೂ ಮದುವೆಯಾಗಿರುವುದಿಲ್ಲ ಹಾಗಾಗಿ ಅವರು ನನ್ನ ಮದುವೆಯ ಮೊದಲು ಯಾರಿಗೂ ವಿಚ್ಛೇದನ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉಪನೊಂದಣಾಧಿಕಾರಿಗಳ ಮುಂದೆ ನನ್ನ ಮತ್ತು ಗುಡ್ಡಪ್ಪನ ಮದುವೆಯಾಗಿರುತ್ತದೆ. ಅ ಕಾಲಕ್ಕೆ ಗುರುಬಸಪ್ಪ ಗೊಲ್ಲರ, ತಿಮ್ಮಣ್ಣ ಗೊಲ್ಲರ, ಹೇಮಣ್ಣ ಗೊಲ್ಲರ, ಕರಿಯಪ್ಪ ಹುಬ್ಬಳ್ಳಿ ಇವರು ಇದ್ದರು. ಸದರಿಯವರು ಯಾರೂ ಸಹ ನನ್ನ ಮದುವೆ ಕಾಲಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಗುಡ್ಡಪ್ಪನವರ ಮದುವೆ ಉಪನೊಂದಣಾಧಿಕಾರಿಗಳ ಮುಂದೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ತೋರಿಸಿದ ಭಾವಚಿತ್ರಗಳಲ್ಲಿ ತೋರಿಸಲಾಗಿ ಅದರಲ್ಲಿರುವ ವ್ಯಕ್ತಿ ನನ್ನ ಗಂಡನಾಗಿರುತ್ತಾನೆ. ಆತನ ಪಕ್ಕದಲ್ಲಿರುವವರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಭಾವಚಿತ್ರಗಳಲ್ಲಿ ಇರುವ ವ್ಯಕ್ತಿಗಳು ನನ್ನ ಗಂಡ ಗುಡ್ಡಪ್ಪನ ಹೆಂಡತಿ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆಯಲ್ಲಿ ತಾಳಿ ಕಟ್ಟುವ ಕಾಲಕ್ಕೆ ಯಾರು ಸ್ವಾಮಿಗಳು ಬಂದಿರುವುದಿಲ್ಲ.

ಈ ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ದಾವಾ ಪತ್ರದ 6 ಮತ್ತು 7 ನೇ ಪ್ಯಾರಾದಲ್ಲಿ ಹೇಳಲಾದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಗಂಡನ ಕುಟುಂಬಕ್ಕೆ ಸೇರಿದ ಆಸ್ತಿಗಳು ಆತನ ಮೊದಲ ಹೆಂಡತಿ ಮಕ್ಕಳು ಒಟ್ಟಿಗೆ ವಾಸವಾಗಿರುವುದರಿಂದ ಅವರ ಸಾಮೂಹಿಕ ಖಾತೆಯಲ್ಲಿದೆ ಎಂದರೆ ಸರಿ. ನನ್ನ ಗುಡ್ಡಪ್ಪನವರ ವಿವಾಹದ ಪ್ರಮಾಣ ಪತ್ರದ ಧೃಢೀಕೃತ ಪ್ರತಿಯನ್ನು ಹಾಜರಪಡಿಸಿರುತ್ತೇನೆ ಎಂದರೆ ಸರಿ. ಮೂಲ ವಿವಾಹ ಪ್ರಮಾಣ ಪತ್ರವು ನಮ್ಮ ವಕೀಲರ ಬಳಿ ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಾವು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡ ಗುಡ್ಡಪ್ಪ ದಿನಾಂಕ 09-10-2006 ರಂದು ಮೃತಪಟ್ಟಿರುತ್ತಾರೆ. ನನ್ನ ಗಂಡ ಮೃತಪಟ್ಟ ನಂತರ ನನ್ನ ಮಾವನವರನ್ನು ಭಾಗಾಂಶವನ್ನು ಕೊಡುವಂತೆ ಕೇಳಿದ್ದು ಅವರು ಕೊಡದೇ ಇರುವ ಕಾರಣ 2016 ನೇ ಇಸವಿಯಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ಗಂಡ ಮೃತಪಟ್ಟ

ಕಾಲಕ್ಕೆ ನಾನು ನನ್ನ ತವರು ಮನೆಯಲ್ಲಿ ಇದ್ದೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ. ನನ್ನ ಸಮಕ್ಷಮ

ಸಹಿ
ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.